ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಸಂಖ್ಯೆ : ಸ.ಶಿ.ಅ/ಸಶಿ/ಐ.ಇ.ಪಿ/2012 – 13. ದಿನಾಂಕ : 24.08.2012

# ಸುತ್ತೋಲೆ

**ವಿಷಯ** : – "ವಿಕಲಚೇತನ ಮಕ್ಕಳಿಗೆ ವೈಯಕ್ತಿಕ ಶೈಕ್ಷಣಿಕ ಯೋಜನೆ ಸಿದ್ಧತೆಯ ಸಪ್ತಾಹ" ಆಚರಿಸುವ ಕುರಿತು.

**ಉಲ್ಲೇಖ** : – 1. ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ:ಸ.ಶಿ.ಅ/ಸ.ಶಿ/ಐ.ಇ.ಪಿ/2012–13 ದಿನಾಂಕ : 13.07.2012

2. ದಿನಾಂಕ : 17.08.2012 ರಂದು ಈ ಕಛೇರಿಲ್ಲಿ ನಡೆದ ಎ.ಪಿ.ಸಿ ಹಾಗೂ ಡಿ.ಐ.ಇ.ಆರ್.ಟಿ ರವರ ಸಭಾ ನಡವಳಿ.

(((((@)))))

**ವಿ**ಷಯಕ್ಕೆ ಸಂಬಂಧಿಸಿದಂತೆ, 2012 – 13 ನೇ ಸಾಲಿಗೆ ಗುರುತಿಸಲಾಗಿರುವ 6 ರಿಂದ 14 ರ ವಯೋಮಾನದ ಎಲ್ಲಾ ಮಕ್ಕಳಿಗೆ ವೈಯಕ್ತಿಕ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವ ಬಗ್ಗೆ ಉಲ್ಲೇಖ 01 ಮತ್ತು 02 ವಿವರವಾಗಿ ತಿಳಿಸಲಾಗಿದೆ. ಇಷ್ಟಾಗಿಯೂ ಇನ್ನೂ ಬಹಳಷ್ಟು ಜಿಲ್ಲೆಗಳಲ್ಲಿ ಈ ಬಗ್ಗೆ ಕಾರ್ಯಪ್ರವೃತ್ತರಾಗಿಲ್ಲದಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ. ವಿಕಲಚೇತನ ಮಕ್ಕಳ ಶೈಕ್ಷಣಿಕ ಮುನ್ನಡೆಯನ್ನು ಅರಿಯಲು ವೈಯಕ್ತಿಕ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವುದು ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ ಸಮಿತಿ ವತಿಯಿಂದ 2012 ರ ಸೆಪ್ಟೆಂಬರ್ 03 ನೇ ತಾರೀಖಿನಿಂದ 2012 ಸೆಪ್ಟೆಂಬರ್ 08 ನೇ ತಾರೀಖಿನವರೆಗೆ "ವಿಕಲಚೇತನ ಮಕ್ಕಳ ವೈಯಕ್ತಿಕ ಶೈಕ್ಷಣಿಕ ಯೋಜನೆ" ಸಪ್ತಾಹವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಅವಧಿಯಲ್ಲಿ ಸಮನ್ವಯ ಶಿಕ್ಷಣ ಚಟುವಟಿಕೆಗಳ ಅನುಷ್ಠಾನದಲ್ಲಿ ತೊಡಗಿಸಿಕೊಂಡಿರುವ ಸಮನ್ವಯ ಶಿಕ್ಷಣ ಸಂಪನ್ಮೂಲ ಶಿಕ್ಷಕರು (ಐ.ಇ.ಆರ್.ಟಿ), ವಿಶೇಷ ಸಂಪನ್ಮೂಲ ಶಿಕ್ಷಕರು, ವಿಶೇಷ ಬಿ.ಇಡಿ ಪಡೆದಿರುವ ಶಿಕ್ಷಕರು ಹಾಗೂ 90 ದಿನಗಳ ಬುನಾದಿ ತರಬೇತಿ ಪಡೆದು ಸಮನ್ವಯ ಶಿಕ್ಷಣ ಚಟುವಟಿಕೆಗಳ ಅನುಷ್ಠಾನದಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡಿರುವ ಶಿಕ್ಷಕರು ಪಾಲ್ಗೊಂಡು ಮಗುವಿನ ಶಾಲೆ, ಶಾಲಾ ಸಿದ್ಧತಾ ಕೇಂದ್ರ ಹಾಗೂ ಮನೆಗೆ ಭೇಟಿ ನೀಡಿ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವುದು. ಈ ಕೈಂಕರ್ಯಕ್ಕೆ ವಿಕಲಚೇತನ ಮಕ್ಕಳ ಸಮನ್ವಯ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಸ್ಥಳೀಯ ಸಂಘ ಸಂಸ್ಥೆಗಳ ಸದಸ್ಯರು,

ಮು.ತಿ.ನೋ

ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳು, ಸ್ಥಳೀಯ ವೈದ್ಯರು, ರೋಟರಿ ಸಂಸ್ಥೆಗಳ ಸದಸ್ಯರು ಐ.ಎಂ.ಎ ಸದಸ್ಯರು ಹಾಗೂ ಪೋಷಕರ ಸಹಕಾರವನ್ನು ಪಡೆಯುವುದು. ಶೈಕ್ಷಣಿಕ ಯೋಜನೆಯ ಸಿದ್ಧತೆಯಲ್ಲಿ ಸಹಕರಿಸುವ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರಯಾಣ, ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುವುದು. ಈ ಸಂಬಂಧ ತಗಲುವ ವೆಚ್ಚವನ್ನು ಸಮನ್ವಯ ಶಿಕ್ಷಣ ಮಧ್ಯವರ್ತನೆಯಡಿಯಲ್ಲಿ ಸಮುದಾಯ ಜಾಗೃತಿ ಚಟುವಟಿಕೆಯಡಿಯಲ್ಲಿ ಭರಿಸಲು ತಿಳಿಸಿದೆ. ಇದಲ್ಲದೆ ಐ.ಇ.ಪಿ ನಮೂನೆಗಳನ್ನು ಮುದ್ರಿಸಲು ಅಗತ್ಯವಿರುವ ಅನುದಾನವನ್ನು ಜಿಲ್ಲಾ ಆಡಳಿತಾತ್ಮಕ ವೆಚ್ಚದಡಿಯಲ್ಲಿ ಭರಿಸಲು ತಿಳಿಸಿದೆ.

ಒಟ್ಟಾರೆ ಈ ಸಪ್ತಾಹದಲ್ಲಿ ಎಲ್ಲಾ ವಿಕಲಚೇತನ ಮಕ್ಕಳಿಗೆ ವೈಯಕ್ತಿಕ ಶೈಕ್ಷಣಿಕ ಯೋಜನೆಯನ್ನು ಸಿದ್ಧಪಡಿಸುವುದು. ಸರ್ವ ಶಿಕ್ಷಣ ಅಭಿಯಾನ ಅನುದಾನವು ವೈಯಕ್ತಿಕ ಶೈಕ್ಷಣಿಕ ಯೋಜನೆ ಸಿದ್ಧವಿರುವ ಮಕ್ಕಳಿಗೆ ಮಾತ್ರ ಲಭ್ಯವಾಗುವುದು. ಈಗಾಗಲೇ ಗುರುತಿಸಿರುವ ವಿಕಲಚೇತನ ಮಗುವಿನ ವೈಯಕ್ತಿಕ ಶೈಕ್ಷಣಿಕ ಯೋಜನೆ ಸಿದ್ಧಪಡಿಸದೆ ನಿಗದಿತ ಘಟಕ ವೆಚ್ಚ ಉಪಯೋಗಿಸದಿದ್ದರೆ, ಅದನ್ನು ಅಸಮರ್ಪಕ ನಿರ್ವಹಣೆ ಎಂದು ಪರಿಗಣಿಸಿ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಕೈಗೊಂಡ ಕ್ರಮದ ಬಗ್ಗೆ ರಾಜ್ಯ ಕಛೇರಿಗೆ ದಿನಾಂಕ : 15.09.2012 ರೊಳಗೆ ವರದಿ ನೀಡುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಗೆ,**

1. ಎಲ್ಲಾ ಶೈಕ್ಷಣಿಕ ಜಿಲ್ಲೆಗಳ ಡಿ.ಡಿ.ಪಿ.ಐ / ಡಿ.ವೈ.ಪಿ.ಸಿ ರವರಿಗೆ.
2. ಎಲ್ಲಾ ಶೈಕ್ಷಣಿಕ ಬ್ಲಾಕ್‌ಗಳ ಬಿ.ಇ.ಒ / ಬಿ.ಆರ್.ಸಿ ರವರಿಗೆ.